M – 2019

Subject Code : 21 (NS)

# HISTORY

(Kannada and English Versions)

Time : 3 Hours 15 Minutes] [Total No. of questions : 37] [Max. Marks : 100

## (Kannada Version)

ಸೂಚನೆಗಳು : 1. ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

2. ದೃಷ್ಟಿವಿಕಲಚೇತನ ವಿದ್ಯಾರ್ಥಿಗಳು ಭಾಗ ಡಿ ಯಲ್ಲಿ ಭೂಪಟದ ಪ್ರಶ್ನೆಯಾದ ಪ್ರಶ್ನೆಸಂಖ್ಯೆ 31(ಎ) ಬದಲಿಗೆ 31(ಬಿ)ಯನ್ನು ಉತ್ತರಿಸುವುದು.

3. ಪ್ರಶ್ನೆಯ ಸೂಚನೆಗಳನ್ವಯವಾಗಿ ಉತ್ತರಿಸುವುದು.

### ಭಾಗ - ಎ

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.

(10 × 1 = 10)

1) ನಾಣ್ಯಶಾಸ್ತ್ರ ಎಂದರೇನು?

2) ವೇದ ಎಂದರೇನು?

3) ಹೊಯ್ಸಳ ರಾಜ್ಯದ ಸ್ಥಾಪಕ ಯಾರು?

4) ಅಕ್ಬರ್ ಜಾರಿಗೊಳಿಸಿದ ಧರ್ಮ ಯಾವುದು?

P.T.O

https://www.karnatakaboard.com

5) ಶಿವಾಜಿಯ ಕಿರೀಟ ಧಾರಣೆಯಾದ ವರ್ಷ ಯಾವುದು?

6) 'ಮೈಸೂರಿನ ಹುಲಿ' ಎಂದು ಯಾರನ್ನು ಕರೆಯಲಾಗಿದೆ?

7) ಝಾನ್ಸಿರಾಣಿ ಲಕ್ಷ್ಮಿಬಾಯಿ ಬ್ರಿಟಿಷರ ವಿರುದ್ಧ ಏಕೆ ದಂಗೆ ಎದ್ದಳು?

8) ಸೋರಿಕೆ ಸಿದ್ಧಾಂತವನ್ನು ಪ್ರತಿಪಾದಿಸಿದವರು ಯಾರು?

9) ಆರ್ಯಸಮಾಜ ಸ್ಥಾಪಕರು ಯಾರು?

10) ನೇತಾಜಿ ಎಂದು ಪ್ರಸಿದ್ಧರಾಗಿದ್ದವರು ಯಾರು?

## ಭಾಗ - ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿರಿ.

(10 × 2 = 20)

11) ಭಾರತದ ಯಾವುದಾದರೂ ಎರಡು ಹೆಸರುಗಳನ್ನು ತಿಳಿಸಿರಿ.

12) ಹೊಸ ಶಿಲಾಯುಗದ ಎರಡು ತಾಣಗಳನ್ನು ಹೆಸರಿಸಿ.

13) ವೈದಿಕ ನಾಗರೀಕತೆಯಲ್ಲಿ ರಾಜನಿಗೆ ಯಾವ ಎರಡು ರಾಜಕೀಯ ಸಂಸ್ಥೆಗಳು ಸಹಾಯ ಮಾಡುತ್ತಿದ್ದವು?

14) ಶಾತವಾಹನರ ಯಾವುದಾದರೂ ಎರಡು ವಾಸ್ತುಶಿಲ್ಪ ಕೇಂದ್ರಗಳನ್ನು ಹೆಸರಿಸಿ.

15) ಒಂದನೇ ರಾಜೇಂದ್ರ ಚೋಳನ ಯಾವುದಾದರೂ ಎರಡು ಬಿರುದುಗಳನ್ನು ತಿಳಿಸಿ.

16) ಆರನೇ ವಿಕ್ರಮಾದಿತ್ಯನ ಆಸ್ಥಾನದ ಕವಿ ಯಾರು? ಅವನ ಕೃತಿಯನ್ನು ಹೆಸರಿಸಿ.

https://www.karnatakaboard.com

17) ತಾಜ್ ಮಹಲ್ ಕಟ್ಟಿಸಿದವರು ಯಾರು? ಅದು ಎಲ್ಲಿದೆ?

18) ಮಧ್ವಾಚಾರ್ಯರು ಸ್ಥಾಪಿಸಿದ ಯಾವುದಾದರೂ ಎರಡು ಮಠಗಳನ್ನು ಹೆಸರಿಸಿ.

19) ಭಾರತದಲ್ಲಿ ಫ್ರೆಂಚರ ಯಾವುದಾದರೂ ಎರಡು ವ್ಯಾಪಾರ ಕೇಂದ್ರಗಳನ್ನು ಹೆಸರಿಸಿ.

20) ಭಾರತದಲ್ಲಿ ಬ್ರಿಟಿಷರು ಜಾರಿಗೆ ತಂದ ಯಾವುದಾದರೂ ಎರಡು ಭೂ ಕಂದಾಯ ಪದ್ಧತಿಗಳನ್ನು ಹೆಸರಿಸಿ.

21) ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಕಾಂಗ್ರೆಸ್ ಅಧಿವೇಶನ ಎಲ್ಲಿ ಜರುಗಿತು? ಯಾವಾಗ?

22) ಕರ್ನಾಟಕ ಏಕೀಕರಣ ಚಳುವಳಿಯ ಯಾರಾದರೂ ಇಬ್ಬರು ನಾಯಕರನ್ನು ಹೆಸರಿಸಿ.

## ಭಾಗ – ಸಿ

III ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 15ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ. (6 × 5 = 30)

23) ಭಾರತದ ಇತಿಹಾಸ ರಚನೆಗೆ ಪ್ರಾಕ್ತನ ಆಧಾರಗಳ ಮಹತ್ವವನ್ನು ಕುರಿತು ಬರೆಯಿರಿ.

24) ಸಿಂಧೂ ನಾಗರೀಕತೆಯ ನಗರ ಯೋಜನೆಯನ್ನು ವಿವರಿಸಿ.

25) ಮಹಾವೀರನ ಜೀವನ ಮತ್ತು ಬೋಧನೆಗಳನ್ನು ಕುರಿತು ಚರ್ಚಿಸಿ.

26) ಬೌದ್ಧ ಧರ್ಮದ ಪ್ರಚಾರಕ್ಕೆ ಅಶೋಕನು ಕೈಗೊಂಡ ಕ್ರಮಗಳಾವುವು?

27) ಮಹಮದ್ ಗವಾನನ ಸಾಧನೆಗಳನ್ನು ವಿವರಿಸಿರಿ.

28) ಶಂಕರಾಚಾರ್ಯರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.

29) ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ಚರ್ಚಿಸಿ.

30) ಸಹಾಯಕ ಸೈನ್ಯ ಪದ್ಧತಿ ಮತ್ತು ದತ್ತು ಪುತ್ರರಿಗೆ ಹಕ್ಕಿಲ್ಲ ನೀತಿಯ ಬಗ್ಗೆ ಬರೆಯಿರಿ.

https://www.karnatakaboard.com

## ಭಾಗ - ಡಿ

IV. ಸೂಚನೆಗಳ ಅನ್ವಯ ಈ ಕೆಳಗಿನ ಪ್ರಶ್ನೆಯನ್ನು ಉತ್ತರಿಸಿ.

31) (ಎ) ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **(5 + 5 = 10)**

a) ಹರಪ್ಪ

b) ಪಾಟಲೀಪುತ್ರ

c) ಕಂಚಿ

d) ಹಳೇಬೀಡು

e) ಆಗ್ರಾ

f) ಹಂಪಿ

g) ಬಾಂಬೆ

h) ಮೀರತ್

**(ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ)**

31) (ಬಿ) ಈ ಕೆಳಗಿನ ಪ್ರಶ್ನೆಯನ್ನು **30**ರಿಂದ **40** ವಾಕ್ಯಗಳಲ್ಲಿ ಉತ್ತರಿಸಿರಿ. **(1 × 10 = 10)**

i) ಗುಪ್ತರ ಕಾಲವನ್ನು ಭಾರತದ ಇತಿಹಾಸದಲ್ಲಿ 'ಸುವರ್ಣಯುಗ' ಎಂದು ಏಕೆ ಕರೆಯುತ್ತಾರೆ?

ಅಥವಾ

ii) ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.

https://www.karnatakaboard.com

## ಭಾಗ - ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 30ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ. (2 × 10 = 20)

32) ಮಹಮದ್ ಬಿನ್ ತುಘಲಕ್‌ನ ಆಡಳಿತ ಪ್ರಯೋಗಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

33) ವಿಜಯನಗರ ಕಾಲದ ಧರ್ಮ, ಸಾಹಿತ್ಯ ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

34) ಸರ್.ಎಂ. ವಿಶ್ವೇಶ್ವರಯ್ಯನವರನ್ನು 'ಆಧುನಿಕ ಮೈಸೂರಿನ ನಿರ್ಮಾತೃ' ಎಂದು ಕರೆಯಲಾಗಿದೆ. ವಿವರಿಸಿ. https://www.karnatakaboard.com

35) ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಗಾಂಧೀಜಿಯ ಪಾತ್ರವನ್ನು ಚರ್ಚಿಸಿ.

## ಭಾಗ - ಎಫ್

VI 36) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. (5 × 1 = 5)

1) ರಾಜನ್ – ಕುಶಾನರ ದೊರೆ

2) ಕುಮುಲಕ್ಯಾಡ್‌ಫೃಷನ್ – ಅದೃಷ್ಟ ಪದ್ಧತಿ

3) ಕುಡುವಲ್ಲಿ – ಬುಡಕಟ್ಟಿನ ಮುಖ್ಯಸ್ಥ

4) ಪಂಪ – ಅನುಭವ ಮಂಟಪ

5) ಬಸವೇಶ್ವರ – ಆದಿಕವಿ

https://www.karnatakaboard.com

37) ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. (5 × 1 = 5)

1) ಮೊದಲನೆ ಪಾಣಿಪತ್ ಕದನ

2) ಕರ್ನಾಟಕ ಏಕೀಕರಣ

3) ಸಹಾಯಕ ಸೈನ್ಯ ಪದ್ಧತಿ

4) ಕಾನಿಷ್ಕನ ಸಿಂಹಾಸನಾರೋಹಣ

5) ತಕ್ಕೋಳಂ ಕದನ

https://www.karnatakaboard.com
Whatsapp @ 9300930012
Send your old paper & get 10/-
अपने पुराने पेपर्स भेजे और 10 रुपये पायें,
Paytm or Google Pay से

https://www.karnatakaboard.com